148th, ಕ್ರ.ಸಂ. 20.

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಸರ್ಕಾರದ ಉತ್ತರ.</u>

<u>ವಿಷಯ:</u>

ದಿನಾಂಕ: 13-12-2022ರ "ಪ್ರಜಾವಾಣಿ" ದಿನಪತ್ರಿಕೆಯಲ್ಲಿ ಬಿಬಿಎಂಪಿ ವತಿಯಿಂದ 25 ಸಾವಿರ ಕೋಟಿ "ರಸ್ತೆ-ಗುಂಡಿ" ಗಾಗಿ ಖರ್ಚು ಮಾಡಿದ್ದರೂ, ಗುಂಡಿ ಮುಕ್ತವಾದ ರಸ್ತೆಗಳ ಬಗ್ಗೆ ವಿಸ್ತೃತ ವರದಿ ಪ್ರಕಟಗೊಂಡಿರುತ್ತದೆ.

ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳಿಗೆ ಮುಕ್ತಿಯೇ ಇಲ್ಲವಾಗಿದ್ದು, ವರ್ಷ ವರ್ಷವೂ ರಸ್ತೆ ಮತ್ತು ದುರಸ್ಥಿ ಮಾಡುತ್ತಿದ್ದರೂ ಅವ್ಯವಸ್ಥೆಯಿಂದ ನಿತ್ಯ ಸಾರ್ವಜನಿಕರಿಗೆ ಯಾತನೆ, ವರ್ಷವಿಡೀ ರಸ್ತೆ ಕಾಮಗಾರಿ ನಡೆಯುತ್ತಿದ್ದರೂ ಶಾಸ್ವತ ಪರಿಹಾರ ದೊರಕದಿರುವುದು ಕಂಡುಬಂದಿರುತ್ತದೆ. ಕಳೆದ ಏಳು ವರ್ಷಗಳಲ್ಲಿ ರೂ. 25 ಸಾವಿರ ಕೋಟಿಗೂ ಹೆಚ್ಚು ಹಣ ರಸ್ತೆ ಅಭಿವೃದ್ಧಿಗೆಂದೇ ವಿನಿಯೋಗವಾಗಿರುತ್ತದೆ.

ಬಿಬಿಎಂಪಿ ವ್ಯಾಪ್ತಿಯ 27 ವಿಧಾನಸಭಾ ಕ್ಷೇತ್ರಗಳಲ್ಲಿ 2015-16ನೇ ಸಾಲಿನಿಂದ 2022ನೇ ಸಾಲಿನವರೆಗೆ ರಸ್ತೆ ನಿರ್ಮಾಣ, ಡಾಂಬರು ಸೇರಿ ರಸ್ತೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ರೂ.18 ಸಾವಿರ ಕೋಟಿಗಳನ್ನು ವಿನಿಯೋಗಿಸಲಾಗಿದೆ. ಇದರ ಜೊತೆಗೆ ಮುಖ್ಯ ಮಂತ್ರಿಗಳು ನೀಡಿದ ರೂ.2400 ಕೋಟಿ ಅಮೃತ ನಗರೋತ್ಥಾನ ಯೋಜನೆಯಡಿ ಮಂಜೂರಾಗಿರುವ ರೂ.6 ಸಾವಿರ ಕೋಟಿಗಳಲ್ಲಿ ಅರ್ಧದಷ್ಟನ್ನು ರಸ್ತೆಗಾಗಿಯೇ ವ್ಯಯ ಮಾಡಲಾಗುತ್ತಿದೆ. ಇವೆಲ್ಲವೂ ಸೇರಿದರೆ ರೂ.25 ಸಾವಿರ ಕೋಟಿಗಳನ್ನು ಮೀರಲಿದೆ.

ನಗರದ ಎಂಟು ವಲಯಗಳಲ್ಲಿ 13 ಸಾವಿರ ಕಿ.ಮೀ. ರಸ್ತೆ ಇದ್ದು, ಇದರಲ್ಲಿ ವಾರ್ಡ್ ರಸ್ತೆಗಳು 11 ಸಾವಿರ ಕಿ.ಮೀ. ಇದೆ. ರೂ.25 ಸಾವಿರ ಕೋಟಿ ಹಣ ಖರ್ಚು ಮಾಡಿದ್ದರೂ ಸಮಸ್ಯೆ ಇಲ್ಲದ ರಸ್ತೆಗಳನ್ನು ಹುಡುಕಬೇಕಾಗಿದೆ. ರಸ್ತೆ ಕಾಮಗಾರಿ ಸೇರಿ ಎಲ್ಲಾ ರೀತಿಯ ವಾರ್ಡ್ ಮಟ್ಟದ ಕಾಮಗಾರಿಗಳಲ್ಲಿ ರೂ.29 ಸಾವಿರ ಕೋಟಿ ವೆಚ್ಚವಾಗಿದ್ದು, ಸಿಂಹಪಾಲು ಬಿಜೆಪಿ ಪಕ್ಷದವರ ಪಾಲಾಗಿರುವುದು ಸಹ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದು ಸರ್ಕಾರದ ಇಬ್ಬಗೆಯ ನೀತಿಯನ್ನು ಎತ್ತಿ ತೋರಿಸುತ್ತದೆ.

ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಬೆಂಗಳೂರು ನಗರದ ರಸ್ತೆಗಳು ಗುಂಡಿಗಳಿಂದ ಮುಕ್ತವಾಗ(ವಾಗಿ)ರುವುದು ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಎಲ್ಲೆಲ್ಲಿ ಕಳಪೆ ಕಾಮಗಾರಿಗಳು ಕಂಡುಬಂದಿವೆ. ಸರ್ಕಾರದ ಹಣ ಪೋಲಾಗಿದೆ ಅಂತಹ ಕಡೆಗಳಲ್ಲಿ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಬೆಂಗಳೂರು ನಗರದ ರಸ್ತೆಗಳನ್ನು ಗುಂಡಿ ಮುಕ್ತವನ್ನಾಗಿ ಮಾಡಬೇಕೆಂಬ ವಿಷಯವನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

---

## ಸರ್ಕಾರದ ಉತ್ತರ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2007 ರಲ್ಲಿ ಸುಮಾರು 245.00 ಚದರ ಕಿಲೋಮೀಟರ್ ವ್ಯಾಪ್ತಿ ಪ್ರದೇಶ ಹೊಂದಿದ್ದು, 2007 ರ ನಂತರ ಏಳು ನಗರ ಸಭೆ ಮತ್ತು ಒಂದು ಪುರಸಭೆಯ ವಿಸ್ತೀರ್ಣ 330.00 ಚದರ ಕಿಲೋಮೀಟರ್ ಮತ್ತು 110 ಹಳ್ಳಿಗಳ 225.00 ಚದರ ಕಿಲೋಮೀಟರ್ ಗಳೊಂದಿಗೆ ಒಟ್ಟು 800.00 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಹೊರ ಹೊಮ್ಮಿರುತ್ತದೆ.

ಈ 800.00 ಚದರ ಕಿಲೋಮೀಟರ್ ವ್ಯಾಪ್ತಿ ಪ್ರದೇಶದಲ್ಲಿ 8 ವಲಯಗಳಿದ್ದು, ಸುಮಾರು 13876.00 ಕಿಲೋಮೀಟರ್ ರಸ್ತೆಯ ಜಾಲವಿರುತ್ತದೆ. ಈ ಪೈಕಿ 1344.84 ಕಿಲೋಮೀಟರ್ ಪ್ರಮುಖ / ಅತಿ ಪ್ರಮುಖ ರಸ್ತೆಗಳು ಹಾಗೂ 12531.00 ಕಿಲೋಮೀಟರ್ ವಾರ್ಡ್ ಮಟ್ಟದ ರಸ್ತೆಗಳು ಅಸ್ಥಿತ್ವದಲ್ಲಿರುತ್ತದೆ. ಸದರಿ ರಸ್ತೆ ಜಾಲದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಮುಖ್ಯ ಅಭಿಯಂತರರು ವಿಭಾಗ/ವಲಯ | ರಸ್ತೆಯ ವಿಧ | ರಸ್ತೆಗಳ ಸಂಖ್ಯೆ | ಉದ್ದ ಕಿ.ಮೀ ಗಳಲ್ಲಿ |
|---|---|---|---|---|
| 1 | ರಸ್ತೆ ಮೂಲ ಭೂತ ಸೌಕರ್ಯ | Arterial/Sub Arterial roads | 470 | 1344.84 |
| 2 | ಪೂರ್ವ ವಲಯ | Collector Streets | 13908 | 1694.93 |
| 3 | ಪಶ್ಚಿಮ ವಲಯ | Collector Streets | 10004 | 1424.24 |
| 4 | ದಕ್ಷಿಣ ವಲಯ | Collector Streets | 10768 | 1528.70 |
| 5 | ಯಲಹಂಕ ವಲಯ | Collector Streets | 9055 | 1528.38 |
| 6 | ಮಹದೇವಪುರ ವಲಯ | Collector Streets | 13759 | 1896.84 |
| 7 | ಬೊಮ್ಮನಹಳ್ಳಿ ವಲಯ | Collector Streets | 12154 | 1775.67 |
| 8 | ರಾಜರಾಜೇಶ್ವರಿನಗರ ವಲಯ | Collector Streets | 11096 | 2072.69 |
| 9 | ದಾಸರಹಳ್ಳಿ ವಲಯ | Collector Streets | 4432 | 607.53 |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 8 ವಲಯಗಳ ಪೈಕಿ 5 ವಲಯಗಳು ಹೊಸದಾಗಿ ಸೇರಿದ ಹೊರ ವಲಯಗಳಾಗಿದ್ದು, ಈ ಹೊರ ವಲಯಗಳ ರಸ್ತೆ ಜಾಲವು ಸುಮಾರು 7881.11 ಕಿಲೋಮೀಟರ್ ಆಗಿರುತ್ತದೆ. ಈ ಪ್ರದೇಶದಲ್ಲಿ ಮೂಲಭೂತ ಸೌಕರ್ಯದ ವ್ಯವಸ್ಥೆಯನ್ನು 2007 ರಿಂದ ಪ್ರಾರಂಭಿಸಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳು ಕೇವಲ "ವಾಹನಗಳ ಸಂಚಾರಕ್ಕೆ ಮಾತ್ರ ಸೀಮಿತವಾಗಿರದೇ" ಮೂಲಭೂತ ಸೌಕರ್ಯ ಒದಗಿಸುವ ಉಪಲಬ್ದಗಳನ್ನು ರಸ್ತೆ ತಳಭಾಗದಲ್ಲಿ ಹೊಂದಿದ್ದು, ಈ ಉಪಲಬ್ದಗಳ ಇರುವಿಕೆಯಿಂದ ರಸ್ತೆಯ ಮೇಲ್ಮೈಗೆ ತೊಂದರೆ ಉಂಟಾಗಿ ರಸ್ತೆಗಳು ಹಾಳಾಗುತ್ತಿರುವುದು ಅನುಭವದಿಂದ ಕಂಡುಬಂದ ಅಂಶವಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 7 ವರ್ಷಗಳು ಅಂದರೆ, 2016–2017 ರಿಂದ 2021–2022 ರವರೆವಿಗೂ ಸರ್ಕಾರದ ವತಿಯಿಂದ "ನಗರೋತ್ಥಾನ ಯೋಜನೆ" 2016–2017,

ಮುಂದುವರೆದು "ನಗರೋತ್ಥಾನ ಯೋಜನೆ" 2017-2018, "ನವ ನಗರೋತ್ಥಾನ ಯೋಜನೆ" 2018-2019, 2019-20 ಮತ್ತು 2020-2021 ಯೋಜನೆಗಳು ಮಂಜೂರಾತಿಯಾಗಿದ್ದು, ಪ್ರಸ್ತುತ 2022-23 ರಲ್ಲಿ "ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ"ಯು ಅನುಮೋದನೆಗೊಂಡಿರುತ್ತದೆ. **ಈ ಯೋಜನೆಗಳು ರಸ್ತೆ ಅಭಿವೃದ್ಧಿ ಮಾತ್ರವಲ್ಲದೇ** ಕೆರೆಗಳ ಅಭಿವೃದ್ಧಿ, ಘನತ್ಯಾಜ್ಯ ಸಂಸ್ಕರಣ ಅಭಿವೃದ್ಧಿ ಕಾಮಗಾರಿ, ಬೃಹತ್ ನೀರುಗಾಲುವೆ ಕಾಮಗಾರಿಗಳು, ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ ಹಾಗೂ ಮೇಲುಸೇತುವೆ / ಕೆಳಸೇತುವೆ ಕಾಮಗಾರಿಗಳು, ಶಾಲೆ-ಆಸ್ಪತ್ರೆ-ಆಟದ ಮೈದಾನಗಳ ಅಭಿವೃದ್ಧಿ ಕಾಮಗಾರಿಗಳು, ರಕ್ಷಣಾ ಇಲಾಖೆಯಿಂದ ಜಾಗಗಳನ್ನು ಪಡೆದು ಅಭಿವೃದ್ಧಿ ಪಡಿಸುವ ಕಾಮಗಾರಿಗಳು, ಟ್ರಾಫಿಕ್ ಮ್ಯಾನೇಜ್‌ಮೆಂಟ್ ಕಾಮಗಾರಿಗಳು, ವೈಟ್ ಟಾಪಿಂಗ್ ಮಾಡುವ ಯೋಜನೆಗಳು, ರೈಲ್ವೆ ಯೋಜನೆ ಕಾಮಗಾರಿಗಳು ಮತ್ತು ಪಾದಚಾರಿ ನಿರ್ಮಾಣ ಕಾಮಗಾರಿಗಳು ಮತ್ತು ಪಾದಚಾರಿ ಮೇಲುಸೇತುವೆ ಕಾಮಗಾರಿಗಳು ಸೇರಿರುತ್ತವೆ. ಈ ವಿವಿಧ ರೂಪದ ಕಾಮಗಾರಿಗಳ ಮೊತ್ತಗಳನ್ನು ರಸ್ತೆ ನಿರ್ಮಾಣ / ನಿರ್ವಹಣೆಗಾಗಿಯೇ ಮಾಡಿದ್ದ ವೆಚ್ಚವೆಂದು ಮಾಡಿರುವ ವ್ಯತ್ಯಾಸದ ವರದಿಯನ್ನು ಒಪ್ಪಲು ಸಾಧ್ಯವಿರುವುದಿಲ್ಲ.

ಕರ್ನಾಟಕ ಸರ್ಕಾರದ ಅನುದಾನವಲ್ಲದೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ಸಂಚಿತ ಅನುದಾನವನ್ನು ರಸ್ತೆಗಳ ನಿರ್ವಹಣೆಗಾಗಿ ಮತ್ತು ರಸ್ತೆ ಗುಂಡಿಗಳ ದುರಸ್ಥಿಗಾಗಿ ಪ್ರತ್ಯೇಕವಾಗಿ ಮೀಸಲಿಡುವ ಪದ್ಧತಿಯು ಜಾರಿಯಲ್ಲಿರುತ್ತದೆ.

2016-17 ರಿಂದ ವಿವಿಧ ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ ಗೊಂಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

**ಕೋಷ್ಟಕ-1**

| ಕ್ರಮ ಸಂಖ್ಯೆ | ವಿವರ | ಮೊತ್ತ (ರೂ. ಕೋಟಿಗಳಲ್ಲಿ) | ಷರಾ |
|---|---|---|---|
| 1 | "ನಗರೋತ್ಥಾನ ಯೋಜನೆ" 2016-2017 | 7300.00 | ಅನುಬಂಧ-1 |
| 2 | "ನಗರೋತ್ಥಾನ ಯೋಜನೆ" 2017-2018 | 2491.00 | ಅನುಬಂಧ-2 |
| 3 | "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆ 2018-19, 2019-20 ಮತ್ತು 2020-21. | 8343.00 | ಅನುಬಂಧ-3 |
| 4 | "ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆ 2021-22, 2022-23 ಮತ್ತು 2023-24 | 6000.00 | ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿರುತ್ತದೆ. |
| | **ಒಟ್ಟು ಮೊತ್ತ** | **24,434.00** | |

ಸದರಿ ಯೋಜನೆಯ ಅನುಬಂಧಗಳಂತೆ ಅನುದಾನವನ್ನು ಪರಿಶೀಲಿಸಲಾಗಿ ರಸ್ತೆ ನಿರ್ಮಾಣ / ರಸ್ತೆ ಅಭಿವೃದ್ಧಿಗಾಗಿ 2016-17 ರಿಂದ ವೆಚ್ಚ ಮಾಡಲಾದ ವಿವರಣೆಗಳು ಕೆಳಕಂಡಂತಿರುತ್ತದೆ.

ಕೋಷ್ಟಕ-2

| ಕ್ರಮ ಸಂಖ್ಯೆ | ವಿವರ | ಮೊತ್ತ ಕೋಟಿಗಳಲ್ಲಿ ರಸ್ತೆ ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನ (ರೂ. ಕೋಟಿಗಳಲ್ಲಿ) | ಷರಾ |
|---|---|---|---|
| 1 | "ನಗರೋತ್ಥಾನ ಯೋಜನೆ" 2016-2017 | 1400.00 | ಅನುಬಂಧ-1ರ ಕ್ರಮ ಸಂಖ್ಯೆ: 8 |
| 2 | "ನಗರೋತ್ಥಾನ ಯೋಜನೆ" 2017-2018 | 840.00 | ಅನುಬಂಧ-2 ರ ಕ್ರಮ ಸಂಖ್ಯೆ: 1 ಮತ್ತು 3 |
| 3 | "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆ 2018-19, 2019-20 ಮತ್ತು 2020-21. | 4107.34 | ಅನುಬಂಧ- 3 |
| 4 | "ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆ 2021-22, 2022-23 ಮತ್ತು 2023-24 | 4000.00 | ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿರುತ್ತದೆ. |

ಪ್ರಸ್ತುತ ಸರ್ಕಾರವು ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣಕ್ಕಾಗಿ ಮತ್ತು ರಸ್ತೆ ಮೇಲ್ಮೈನ ದುರಸ್ಥಿಗಾಗಿ ಅನುದಾನವನ್ನು ಮೀಸಲಿರಿಸಲಾಗಿದ್ದು ಸುಮಾರು 4000.00 ಕೋಟಿಗಳನ್ನು ರಸ್ತೆಗಳ ಅಭಿವೃದ್ಧಿಗಾಗಿ ಮೀಸಲಿರಿಸಲಾಗಿದೆ. ಈ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಪ್ರಮುಖ / ಅತಿಪ್ರಮುಖ ರಸ್ತೆಗಳ ಒಟ್ಟು 477.19 ಕಿಲೋಮೀಟರ್ ರಸ್ತೆಯನ್ನು ದುರಸ್ಥಿಗೊಳಿಸಲು ಹಾಗೂ ವಾರ್ಡ್ ಮಟ್ಟದ 1705.31 ಕಿಲೋಮೀಟರ್ ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ವಿವರವನ್ನು ಅನುಬಂಧ-4 ರಲ್ಲಿ ನೀಡಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ರಸ್ತೆಗಳ ನಿರ್ಮಾಣ / ನಿರ್ವಹಣೆ ಮಾಡುವ ಮುನ್ನ ಪ್ರಸ್ತಾಪಿತ ರಸ್ತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸ್ಥಳಕ್ಕೆ ಅನುಗುಣವಾಗಿ ಇಂಡಿಯನ್ ರೋಡ್ ಕಾಂಗ್ರೆಸ್ (IRC) ಹಾಗೂ ಎಂ.ಓ.ಆರ್.ಟಿ. ಅಂಡ್ ಹೆಚ್ (MORTH) ವಿಶಿಷ್ಟ ವಿವರಣೆಗಳನ್ನು ಅಳವಡಿಸಿಕೊಂಡು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ನಂತರ 10.00 ಕೋಟಿಗಳು ಮೀರಿದ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೇಮಿಸಿಕೊಳ್ಳಲಾಗಿರುವ "ತಾಂತ್ರಿಕ ಸಲಹಾ ಸಮಿತಿ" ಮುಂದೆ ವಿಷಯವನ್ನು ಮಂಡಿಸಿ ಟೆಂಡರ್ ಕರೆಯುವ ವ್ಯವಸ್ಥೆಯು ಚಾಲ್ತಿಯಲ್ಲಿರುತ್ತದೆ. ಟೆಂಡರ್ ನಂತರ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಯೋಜನಾ ಸಮಾಲೋಚಕರನ್ನು ನೇಮಿಸಿಕೊಳ್ಳಲಾಗುತ್ತಿದ್ದು, ಸದರಿಯವರು ಕಾಮಗಾರಿ ನಿರ್ವಹಿಸಿದ ಬಗ್ಗೆ ಕಡ್ಡಾಯವಾಗಿ ರಸ್ತೆ ಇತಿಹಾಸ ವಹಿಯಲ್ಲಿ ಆನ್‌ಲೈನ್ ನಲ್ಲಿ ನಮೂದಿಸುವ ವ್ಯವಸ್ಥೆಯು ಜಾರಿಯಲ್ಲಿರುತ್ತದೆ.

2019-2020ರ ನಂತರ ಬೆಂಗಳೂರು ನಗರವು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಜಲಮಂಡಳಿ ವತಿಯಿಂದ 110 ಹಳ್ಳಿಗಳ ಪ್ರದೇಶದಲ್ಲಿ ಅಂದರೆ 225 ಚದರ ಕಿಲೋಮೀಟರ್‌ನಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಸುಮಾರು 1600 ಕಿಲೋಮೀಟರ್ ಉದ್ದದ ರಸ್ತೆಯನ್ನು ಅಗೆದು ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

ಬೆಸ್ಕಾಂ ವತಿಯಿಂದ 6000 ಕಿಲೋಮೀಟರ್ ರಷ್ಟು ಉದ್ದದ, 11. ಕೆ.ವಿ. ಎತ್ತರದ ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸುತ್ತಿದ್ದು, ಈ ಯೋಜನೆಯ ಕಾಮಗಾರಿಗಾಗಿ ರಸ್ತೆಯನ್ನು ಅಗೆಯಲಾಗಿರುತ್ತದೆ. ಕೆ.ಪಿ.ಟಿ.ಸಿ.ಎಲ್ ವತಿಯಿಂದ ಹಾಗೂ ಮೆಟ್ರೋ ಯೋಜನೆಗಾಗಿ ಮತ್ತು ಬೆಂಗಳೂರು ನಗರದ ಪ್ರದೇಶದಲ್ಲಿ ವಿದ್ಯುತ್ ಪ್ರಸರಣಕ್ಕಾಗಿ ಹತ್ತು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ರಸ್ತೆ ಅಗೆತವನ್ನು ಅನಿವಾರ್ಯವಾಗಿ ಕೈಗೆತ್ತಿಕೊಳ್ಳಲಾಗಿದ್ದು ಪ್ರಗತಿಯಲ್ಲಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೆಲವು ಆಯ್ದ ಬಡಾವಣೆಗಳಲ್ಲಿ ಗೇಲ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಮನೆ ಮನೆಗೆ ನೈಸರ್ಗಿಕ ಅನಿಲ ಸಂಪರ್ಕ ಒದಗಿಸುತ್ತಿದ್ದು, ಸದರಿ ಯೋಜನೆಗಾಗಿ ರಸ್ತೆಯನ್ನು ಅಗೆಯಲಾಗುತ್ತಿರುತ್ತದೆ.

ಮುಂದುವರೆದು, ಬೆಂಗಳೂರು ನಗರದಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ, 2020-21 ಮತ್ತು 2021-22 ರಲ್ಲಿ ಉಂಟಾದ ಕೋವಿಡ್ ಸಾಂಕ್ರಾಮಿಕದಿಂದಾಗಿ "Work from home and online Classes" ಪ್ರಾರಂಭವಾದ ಹಿನ್ನೆಲೆಯಲ್ಲಿ, ಅಂತರ್ಜಾಲದ ಬೇಡಿಕೆಗಳು ತೀವ್ರವಾಗಿ ಹೆಚ್ಚಾಗಿದ್ದು, ಓ.ಎಫ್.ಸಿ. ಕೇಬಲ್ ಅಳವಡಿಕೆಗಾಗಿ ಬಹುತೇಕ ಕಡೆ ರಸ್ತೆಗಳನ್ನು ಅಗೆಯಲಾಗಿರುತ್ತದೆ.

2021-2022 ಮತ್ತು 2022-23 ರಲ್ಲಿ ಬಿದ್ದಂತಹ ಭಾರಿ ಮತ್ತು ಅಕಾಲಿಕ ಮಳೆಯಿಂದಾಗಿ ರಸ್ತೆಗಳ ಕತ್ತರಿಸಿದ ಭಾಗಗಳನ್ನು ಪುನರ್ ಸ್ಥಾಪನೆ ಮಾಡಲು ಅಡಚಣೆ ಉಂಟಾಗಿದ್ದು ಮತ್ತು ರಸ್ತೆ ಕೆಲವು ಭಾಗಗಳು ಮಳೆಯಿಂದಾಗಿ ತೀವ್ರವಾಗಿ ಹಾನಿ ಉಂಟಾಗಿ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿರುತ್ತದೆ. ಮಳೆಯ ತೀವ್ರತೆಯಿಂದಾಗಿ ಬೆಂಗಳೂರು ಜಲ ಮಂಡಳಿಯ ಮ್ಯಾನ್ ಹೋಲ್‌ಗಳು ಉಕ್ಕಿಹರಿದು ರಸ್ತೆ ಮೇಲ್ಮೈಗೆ ಹಾನಿ ಉಂಟಾಗಿರುವುದು ಸಹ ಕಂಡುಬಂದಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ಹೊಸ ಯೋಜನೆಗಳಿಗಾಗಿ ಮತ್ತು ಪೂರಕ ಅಭಿವೃದ್ಧಿಗಾಗಿ ರಸ್ತೆಯನ್ನು ಬಹುತೇಕ ಕಡೆ ಅಗೆಯಲಾಗುತ್ತಿರುವುದರಿಂದ, ಅಕಾಲಿಕ ಮಳೆಯಿಂದಾಗಿ, ರಸ್ತೆಯ ಮೇಲ್ಮೈಗೆ ತೀವ್ರವಾಗಿ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಸದರಿ ಮೇಲ್ಕಂಡ ಯೋಜನೆಗಳು ನಗರದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

ಸರ್ಕಾರವು 110 ಹಳ್ಳಿಗಳ ಪ್ರದೇಶದಲ್ಲಿ ಬೆಂಗಳೂರು ಜಲಮಂಡಳಿಯಿಂದ ನೀರಿನ ಕೊಳವೆಗಳನ್ನು ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸಲು ಕತ್ತರಿಸಿದ ರಸ್ತೆ ಭಾಗಗಳನ್ನು ಪುನರ್ ಸ್ಥಾಪನೆ ಮಾಡಲು

ರೂ.1000.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರಸ್ತೆ ಪುನರ್‌ಸ್ಥಾಪನೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ವಾಹನ ದಟ್ಟಣೆ ಮತ್ತು ಅಕಾಲಿಕ ಮಳೆಯಿಂದ ರಸ್ತೆಯ ಕೆಲವು ಭಾಗಗಳಲ್ಲಿ ಉಂಟಾಗುತ್ತಿರುವ ರಸ್ತೆ ಗುಂಡಿಗಳನ್ನು ಮತ್ತು ಹಾಳಾದ ರಸ್ತೆ ಭಾಗಗಳನ್ನು ದುರಸ್ಥಿಗೊಳಿಸಲು ಮತ್ತು ರಸ್ತೆ ನಿರ್ವಹಣೆಯನ್ನು ನಿಗಧಿತ ಅವಧಿಯಲ್ಲಿ ಕೈಗೆತ್ತಿಕೊಳ್ಳಲು ಬಿಬಿಎಂಪಿಯ ಏಕೈಕ ಸ್ವಂತ ಡಾಂಬರು ಮಿಶ್ರಣ ಘಟಕದೊಂದಿಗೆ ಇನ್ನೂ ನಾಲ್ಕು ಪ್ರದೇಶಗಳಲ್ಲಿ ಬಾಡಿಗೆ ರೂಪದಲ್ಲಿ ಡಾಂಬರು ಮಿಶ್ರಣ ಘಟಕವನ್ನು ಪಡೆಯಲಾಗಿದ್ದು, ಗುತ್ತಿಗೆದಾರರಿಂದ ಈಗಾಗಲೆ ಗುಂಡಿಮುಚ್ಚುವ ಕಾರ್ಯವು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತಿದ್ದು ಕೆಲವು ಭಾಗಗಳಲ್ಲಿ ನೀರಿನ ಸೋರಿಕೆ ಮತ್ತು ರಸ್ತೆಗಳನ್ನು ಕತ್ತರಿಸಿದ ಭಾಗಗಳನ್ನು ಮರು ಡಾಂಬರೀಕಣ ಮಾಡುವ ಕ್ರಮವು ಜಾರಿಯಲ್ಲಿರುತ್ತದೆ.

ಮಳೆಗಾಲದಲ್ಲೂ ಗುಂಡಿ ಮುಚ್ಚಬಹುದಾದ Asphalt Cold Mix ತಯಾರಿಕ ತಂತ್ರಜ್ಞಾನದ ಹೆಚ್ಚುವರಿ ಅಡಕಗಳನ್ನು ಬಿಬಿಎಂಪಿಯ ಏಕೈಕ ಸ್ವಂತ ಡಾಂಬರು ಮಿಶ್ರಣ ಘಟಕಕ್ಕೆ ಜೋಡಣೆ ಮಾಡಲಾಗಿದ್ದು, ದಿನಾಂಕ:15.07.2022 ರಂದು ಸದರಿ ಮೆ॥ Infra Source Equipment & materials LLP, Mumbai ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದ್ದು, ಸದರಿ ಘಟಕದಿಂದ Asphalt Cold Mix ಮಿಶ್ರಣವನ್ನು ತಯಾರಿಸುವ ಕೆಲಸವು ಕಾರ್ಯಾರಂಭವಾಗಿರುತ್ತದೆ.

ವಾರ್ಡ್ ಮಟ್ಟದಲ್ಲಿ ಆದ್ಯತೆಯ ಮೇಲೆ Liquid Emulsion Drum ಗಳನ್ನು ವಿತರಿಸಲಾಗಿದ್ದು, ತ್ವರಿತವಾಗಿ ಸ್ಥಳದಲ್ಲಿಯೇ ಡಾಂಬರು ಮಿಶ್ರಣ ತಯಾರಿಸಿ ಸೂಕ್ಷ್ಮ ಮತ್ತು ಅಪಘಾತ ಸರಹದ್ದುಗಳಲ್ಲಿ ರಸ್ತೆ ಗುಂಡಿ ಮುಚ್ಚಲು ಕ್ರಮಕೈಗೊಳ್ಳಲಾಗಿರುತ್ತದೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಪ್ರಥಮ ಬಾರಿಗೆ "ಎಫ್.ಎಂ.ಎಸ್. ಸಾಫ್ಟ್‌ವೇರ್ ಅನ್ನು ಅಳವಡಿಸಿಕೊಳ್ಳಲಾಗಿದ್ದು, Global Positioning System (GPS) ಆಧಾರದಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಿ ಅವುಗಳನ್ನು ದುರಸ್ಥಿ ಪಡಿಸಲು ಕ್ರಮವಹಿಸಲಾಗಿದ್ದು, ರಸ್ತೆ ಗುಂಡಿ ಮುಚ್ಚುವಿಕೆಯಲ್ಲಿ ಪಾರದರ್ಶಕತೆಯನ್ನು ಜಾರಿಗೆ ತರಲಾಗಿರುತ್ತದೆ.

ರಸ್ತೆ ನಿರ್ಮಾಣ ಮತ್ತು ಗುಂಡಿಗಳ ನಿರ್ವಹಣೆಯ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ವರ್ಗಕ್ಕೆ ತರಭೇತಿಗಳನ್ನು ನೀಡಲಾಗಿದ್ದು, ಎಲ್ಲಾ ಅಭಿಯಂತರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹೊರತರಲಾಗಿರುವ "Guidelines for Construction and Maintenance of Bengaluru City Roads" ಎಂಬ ಕೈಪಿಡಿಯಂತೆ ಗುಣಮಟ್ಟದ ರಸ್ತೆ ನಿರ್ಮಾಣ ಮತ್ತು ಗುಂಡಿಗಳ ನಿರ್ವಹಣೆಗೆ ಆದ್ಯತೆಯನ್ನು ನೀಡಲಾಗಿರುತ್ತದೆ.

ಸರ್ಕಾರದ ವಿವಿಧ ಇಲಾಖೆಗಳ ನಡುವೆ ರಸ್ತೆ ಅಗೆತದ ಬಗ್ಗೆ ಕಾರ್ಯಸೂಚಿ ಮತ್ತು ಕಾರ್ಯಕ್ರಮ ಪಟ್ಟಿಯನ್ನು ವಿನಿಮಯ ಮತ್ತು ಸಮನ್ವಯ ಸಾಧಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ "ಅಂತರ್ ಇಲಾಖಾ ಸಮನ್ವಯ ಸಮಿತಿ" ಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ರಸ್ತೆ ಅಗೆತದ ಮತ್ತು ದುರಸ್ಥಿಯ ಬಗ್ಗೆ ವ್ಯವಸ್ಥಿತವಾಗಿ ಕಾರ್ಯೋನ್ಮುಖವಾಗಿರುತ್ತದೆ. ಕಿರಿಯ ಅಧಿಕಾರಿಗಳ ನಡುವೆ "ವಾಟ್ಸಪ್ ಗ್ರೂಪ್‌ಗಳನ್ನು ರಚಿಸಲಾಗಿದ್ದು" ಕೆಳಹಂತದಲ್ಲಿ ಸಮನ್ವಯತೆಯನ್ನು ಸಾಧಿಸಲು ಕ್ರಮವಹಿಸಲಾಗಿರುತ್ತದೆ.

ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆ / ಸಂಸ್ಥೆಗಳೊಂದಿಗೆ ದಿನಾಂಕ: 08-04-2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಅಗೆತದ ಬಗ್ಗೆ ಸಭೆಯನ್ನು ನಡೆಸಿ, ರಸ್ತೆ ಕತ್ತರಿಸುವ ಇಲಾಖೆಗಳೇ ರಸ್ತೆ ಪುನರ್ ಸ್ಥಾಪನೆಯನ್ನು ಮಾಡುವಂತೆ ನಿರ್ದೇಶನ ನೀಡಲಾಗಿರುತ್ತದೆ. ಸದರಿ ನಡವಳಿಯನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ.

**ಈ ಹಿನ್ನೆಲೆಯಲ್ಲಿ, ದಿನಾಂಕ: 13-12-2022 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ 25 ಸಾವಿರ ಕೋಟಿಗಳನ್ನು "ರಸ್ತೆ ಗುಂಡಿಗಾಗಿ ಖರ್ಚು ಮಾಡಿರುವ ಬಗ್ಗೆ" ಪ್ರಕಟಗೊಂಡಿರುವ ವರದಿಯು ವಾಸ್ತವಾಂಶದಿಂದ ಕೂಡಿರುವುದಿಲ್ಲ ಹಾಗೂ ಸದರಿ ವರದಿಯು ಮಾಹಿತಿಯ ಕೊರತೆಯಿಂದಾಗಿ ಪ್ರಕಟಿಸಿರುವ ವರದಿಯಾಗಿರುತ್ತದೆ.**

---

**ಸಂಖ್ಯೆ: ನಅಇ 1015 ಎಂಎನ್‌ವೈ 2022 (ಇ)**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**